

ಎಚ್.ಎಸ್. ಶ್ರೀಮತಿ

# ಗಂಡು ನೋಟದಲ್ಲಿ ಹೆಣ್ಣು

ಸಂಸ್ಕೃತಿ ಅಧ್ಯಯನ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದ ಬ್ರಿಟಿಷ್ ವಿದ್ವಾಂಸ ರೇಮಂಡ್ ವಿಲಿಯಮ್ಸ್, ಸಂಸ್ಕೃತಿಯನ್ನು, 'ಸಮಗ್ರ ಬದುಕಿನ ಕ್ರಮ' ಎಂದು ವ್ಯಾಖ್ಯಾನಿಸುತ್ತಾನೆ. ಸಂಸ್ಕೃತಿಯ ಒಂದು ಉತ್ಪನ್ನವೇ ಆದ ಸಾಹಿತ್ಯವು ಕೂಡಾ ಈ ಸಮಗ್ರ ಬದುಕಿನ ಕ್ರಮವನ್ನು ಕಾಣಿಸುವ ಕೆಲಸವನ್ನೇ ಮಾಡುತ್ತದೆ. ಮುಂದುವರೆದು, ಸಂಸ್ಕೃತಿಯ ಆದರ್ಶಗಳನ್ನು ಜನಸಾಮಾನ್ಯರ ಬದುಕುವ ಕ್ರಮದಲ್ಲಿ ಸ್ಥಿರೀಕರಿಸಿ, ನೆಲೆಗೊಳಿಸುವ, ತಲೆಮಾರುಗಳಲ್ಲಿ ರವಾನಿಸುವ ಒಂದು ಪ್ರಧಾನ ಮಾಧ್ಯಮವಾಗಿ, ತಂತ್ರವಾಗಿ, ಸಾಧನವಾಗಿಯೂ ಅದು ಕೆಲಸ ಮಾಡುತ್ತದೆ. ಕುವೆಂಪು ಅವರದೇ ಒಂದು ಪದ್ಯ ಈ ಮಾತನ್ನು ಸಮರ್ಥಿಸುವಂತೆ ಇದೆ:

**ಕವಿಯ ಹೃದಯವೊಂದು ವೀಣೆ**
**ಲೋಕವದನು ಮಿಡಿವುದು**
**ವ್ಯಕ್ತಿತನವೆ ಕವಿಗೆ ಇಲ್ಲ, ಅಥವ ಎಲ್ಲ**
**ಎಂತೊ ನಾಡಿನೊಡಲ ನಾಡಿ**
**ಎಂತುಟಾಸೆಯಿಹುದೋ ನೋಡಿ**
**ಎಂತೋ ಜನದ ಮೂಕವಾಣಿ**
**ಅಂತೆ ತಂತಿ ನುಡಿವುದು**

ಪಿತೃಪ್ರಧಾನ ಸಮಾಜದ, ಸಂಸ್ಕೃತಿಯ ಎಲ್ಲ ಉತ್ಪನ್ನಗಳೂ 'ಬದುಕುವ ಕ್ರಮ'ವನ್ನು ಗಂಡುನೋಟ ಕ್ರಮದಲ್ಲಿಯೇ ವ್ಯಾಖ್ಯಾನಿಸುತ್ತವೆ. ಸಾಹಿತ್ಯ ಕೃತಿಗಳು ಗಂಡು ಹಾಗೂ ಹೆಣ್ಣುಗಳ ಬದುಕುವ ಕ್ರಮವನ್ನು, ಅವರಿಬ್ಬರ ನಡುವೆ ಇರುವ ಸಂಬಂಧಗಳ ಸ್ವರೂಪವನ್ನು ಇದೇ ಗಂಡು ನೋಟ ಕ್ರಮದಲ್ಲಿಯೇ 'ಕಾಣಿಸುತ್ತವೆ.' ಅವರಿಬ್ಬರ ನಡುವೆ ಇರುವುದು ಅಧಿಕಾರ ಮತ್ತು ಅಧೀನತೆಯ ಸಂಬಂಧವೇ ಎಂಬುದನ್ನು ಸಾಬೀತು ಪಡಿಸುತ್ತದೆ.

ಈ ಹಿನ್ನೆಲೆಯಲ್ಲಿ ಕುವೆಂಪು ಅವರ 'ಮನೆಮನೆಯ ತಪಸ್ವಿನಿಗೆ' ಕವನವನ್ನು ಓದಿದಾಗ ಅನಿಸಿದ ಕೆಲವು ಮಾತುಗಳನ್ನು ಇಲ್ಲಿ ಹಂಚಿಕೊಳ್ಳಬೇಕೆನಿದೆ. ಈ ಕವನವು ಹೆಣ್ಣನ್ನು ಕುರಿತದ್ದೇ ಆದರೂ, ಅಲ್ಲಿ ಹೆಣ್ಣು ಇಲ್ಲ. ಹೆಣ್ಣಿನ ಜೊತೆ ಯಾವುದೇ ಮಾತುಕತೆಯೂ ನಡೆಯುವುದಿಲ್ಲ. ಮನೆಮನೆಯ ಹೆಣ್ಣುಗಳಿಗೆ ಹತ್ತು ಹಲವು ಆದೇಶಗಳು, ಸೂಚನೆಗಳು, ನಿರ್ದೇಶನಗಳು ಮಾತ್ರವೇ ಇವೆ. ಈ ಚೌಕಟ್ಟಿನಲ್ಲಿಯೇ ಅವಳ 'ಬದುಕಿನ ಕ್ರಮ'ವು ಸಾಗಬೇಕು ಎಂಬ ನಿಯಮಾವಳಿಯೇ ಪದ್ಯದ ಸಾಲುಗಳ ಉದ್ದಕ್ಕೂ ಹರಡಿಕೊಂಡಿದೆ. ಈ 'ಹೆಣ್ಣು ತಪಸ್ವಿನಿ'ಯು ಕೈಗೊಳ್ಳಬೇಕಾದ ತಪಸ್ಸಿನ ಪ್ರತಿಯೊಂದು ಹಂತದ ಬಗ್ಗೆಯೂ ಕಟ್ಟುನಿಟ್ಟಾದ ನಿರ್ದೇಶನವು ಇದೆ. ಮೊದಲಿಗೆ ಈ ತಪಸ್ಸಿನ 'ಸಂಕಲ್ಪ' ಅವಳದಲ್ಲವೇ ಅಲ್ಲ. ಇವನಿಗಾಗಿ ಇವನು ಹೇಳಿದಂತೆ ಅವಳು ತಪಸ್ಸು ಮಾಡಬೇಕು ಅಷ್ಟೇ. ಅವಳ ಬದುಕು ಈ ತಪಸ್ಸು ಅಷ್ಟೇ. ಅವಳ